## ಕೊಬ್ಬರಿ ಸರ!

ನಮ್ಮ ಅಕ್ಕನ ಮನೆ ಶತಮಾನವನ್ನು ಕಂಡಿದೆ. ಮೇಲು ಮುದ್ದೆಯ ಮನೆಮಾಳಿಗೆಯ ಒಳಗಡೆಗೆ ಬೇವಿನ, ಸಾಗವಾನಿಯ ಕಟ್ಟಿಗೆಗಳನ್ನು (ರೀಪು) ಜೋಡಿಸಲಾಗಿದೆ. ಇತ್ತೀಚೆಗೆ ಅವಳ ಮನೆಗೆ ಭೇಟಿ ಕೊಟ್ಟಾಗ ಜಂತಿಗೆ ಕೊಬ್ಬರಿಸರವನ್ನು ಜೋತುಬಿಟ್ಟಿರುವುದನ್ನು ಕಂಡು ವಿಸ್ಮಯಗೊಂಡೆ.

ಯಲ್ಲಮ್ಮನ ಗುಡ್ಡದಲ್ಲಿ ಒಡೆಸಿದ ತೆಂಗಿನಕಾಯಿಗಳನ್ನು ಬಿಸಿಲಿಗೆ ಒಣಗಿಸಿ ಒಳಗಿನ ಕೊಬ್ಬರಿ ಬಟ್ಟಲುಗಳನ್ನು ತೆಗೆದು ಸರ ಮಾಡಲಾಗುವುದು. ಇದನ್ನು ಮತ್ತಷ್ಟು ಒಣಗಿಸಿ ನಂತರ ಅವುಗಳನ್ನು ಕೊಬ್ಬರಿಎಣ್ಣೆಯನ್ನು ತಯಾರಿಸಲು ಕೊಡುವರು.

**-ರಾಜಕುಮಾರ ಭೀ. ವಗ್ಯಾನವರ, ಬಾದಾಮಿ**





## ಕಲ್ಲಿನಲ್ಲಿ ಮೊಲ

ಈ ಮೊಲ ತನ್ನಷ್ಟಕ್ಕೆ ತಾನು ಆರಾಮವಾಗಿ ಗೂಡಿನಲ್ಲಿ ಕುಳಿತಿದೆ. ಯಾರು ಓಡಿಸಿದರೂ ಹೆದರಿ ಓಡುವುದಿಲ್ಲ. ಕೊಲ್ಲಾಪುರದ ದೇವಸ್ಥಾನವೊಂದರ ಗೋಡೆಯ ಮೇಲೆ ಕಲ್ಲಿನಲ್ಲಿ ಈ ಮೊಲವನ್ನು ಕೆತ್ತಲಾಗಿದೆ. ಕಲಾಕಾರನ ಕೈಚಳಕದಲ್ಲಿ ಮೂಡಿದ ಈ ಪುಟ್ಟ ಮೊಲ ದೇವಸ್ಥಾನಕ್ಕೆ ಬರುವ ಭಕ್ತರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ.

**-ಜಗದೀಶ ಎಂ. ಸಂಗಣ್ಣವರ, ಬೆಳಗಾವಿ**

## ಉದ್ಯಾನವಾದ ಕಸದ ರಾಶಿ

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಹೃದಯಭಾಗದಲ್ಲಿ ರಾಷ್ಟ್ರೀಯ ಹೆದ್ದಾರಿಯ ಪಕ್ಕ ತ್ಯಾಜ್ಯವಸ್ತುಗಳ ಒಂದು ಡಂಪಿಂಗ್ ಯಾರ್ಡ್ ಇತ್ತು. ವಾಣಿಜ್ಯ ಸಂಕೀರ್ಣಗಳು, ಆಸ್ಪತ್ರೆ, ಹೋಟೆಲ್‌ಗಳು ಸುರಿಯುವ ಕಸದಿಂದ ಕೆಟ್ಟವಾಸನೆ, ಸೊಳ್ಳೆಗಳ ಕಾಟ ಮಿತಿಮೀರಿ ಸಾಂಕ್ರಾಮಿಕ ರೋಗಗಳಿಗೆ ದಾರಿ ಮಾಡಿಕೊಡುವ ಅಪಾಯ ಎದುರಾಗಿತ್ತು. ಆದರೆ ಸಕಾಲದಲ್ಲಿ ಎಚ್ಚೆತ್ತುಕೊಂಡ ಬಂಟ್ವಾಳ ಪುರಸಭೆಯವರು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರ ಸಹಕಾರದೊಂದಿಗೆ ಲೋಡುಗಟ್ಟಲೆ ಮಣ್ಣು ಸುರಿದು ಅದೇ ಹಳ್ಳದಲ್ಲಿ ಬಹಳ ಸುಂದರವಾದ 'ಜೋಡು ಮಾರ್ಗ ಉದ್ಯಾನವನ'ವನ್ನು ನಿರ್ಮಿಸಿದ್ದಾರೆ.

ಹಸಿರು ಹುಲ್ಲು ಹಾಸು, ಸೌರಶಕ್ತಿಯ ದೀಪಗಳು, ಮಳೆನೀರು ಕೊಯ್ಲಿಗಾಗಿ ಇಂಗು ಗುಂಡಿಗಳು, ಇಂಟರ್‌ಲಾಕ್ ಅಳವಡಿಸಿದ ಸುರಕ್ಷಿತ ನಡೆದಾಡುವ ದಾರಿ, ಚಿಮ್ಮುವ ಕಾರಂಜಿ, ಎಫ್.ಎಂ. ರೇಡಿಯೋ, ವೈಫೈ ಹೀಗೆ ಆಧುನಿಕ ಸೌಲಭ್ಯಗಳನ್ನು ಅಳವಡಿಸಿಕೊಂಡು ಜನಸ್ನೇಹಿ, ಪರಿಸರಸ್ನೇಹಿ ಟ್ರೀ ಪಾರ್ಕ್ ರೂಪುಗೊಂಡಿದೆ.

**ಚಿತ್ರ-ಬರಹ: ಡಾ.ವೇಣುಗೋಪಾಲ ಶರ್ಮಾ, ಗುರುವಾಯನಕೆರೆ**

